ನಂಜುಂಡನಿಗೆ ದೇವೀರಿಯ ಹಟಮಾರಿತನಕ್ಕೆ ಸಿಟ್ಟು ಬಂತು.

ಮಾತು ಮಾತಿಗೆ ಮಾತು ಕೊಡುತಾಳೆಂದು
ನಾಗ ಬೆತ್ತದಲ್ಲಿ ಸೆಣೆದಾರು। ನಂಜುಂಡ|
ಹಣವ ತಕ್ಕೊಂಡು ನಡೆದಾರು

ದೇವೀರಿಗೆ ತಡೆಯಲಾರದ ಸಿಟ್ಟು ಬಂದು ಗಂಡನಿಗೆ ಹಿಡಿಶಾಪ ಹಾಕುತ್ತಾಳೆ.

ಕಳ್ಳ ನಂಜುಂಡ ಕಣಿವೆಲಿ ಓಗುವಾಗ
ಕಳ್ಳರು ತಲಿ ಮ್ಯಾಲೆ ಉಯ್ಯ ಬಾರದೆ
ರಾಯ ನಂಜುಂಡ ಓಗುವ ದಾರೀಲಿ
ಹಾವಾರು ಕಚ್ಚಿ ಸಾಯ ಬಾರದೆ
ಪುರುಷ ನಂಜುಂಡ ಓಗುವ ಆದೀಲಿ
ಮರ ಮುರಿದು ಮ್ಯಾಲ ಬೀಳಬಾರದೆ

ನಂಜುಂಡ ತನ್ನ ಎರಡನೇ ಹೆಂಡತಿ ಅಕ್ಕಮ್ಮನ ಮನೆಗೆ ಬರುತ್ತಾನೆ. ಅಲ್ಲಿ ಗಡದ್ದು ಊಟ ಮಾಡಿ ಗಂಡಹೆಂಡತಿ ಮಲಗಿಕೊಳ್ಳುತ್ತಾರೆ. ಅಕ್ಕಮ್ಮನಿಗೆ ಗಂಡ ಒತ್ತಿನಲ್ಲಿರುವ ಸಂಭ್ರಮಕ್ಕೆ ಬೇಗ ನಿದ್ದೆ ಬರುವುದಿಲ್ಲ. ನಂಜುಂಡ ದೇವರನ್ನು ಪ್ರಾರ್ಥಿಸುತ್ತಾನೆ.

ಮಲ್ಲಾರಿ ಮೂಲೆ ಮುಂಗರ ಗೋಡಿನ ಬಸವ
ಮಡದಿಗೆ ನಿದಿರೆ ಬಂದಾರೆ
ಕೊರಳಿಗೆ ಉರಿಗೆಜ್ಜೆ ಮಾಡಿಸುವೆ

ಸ್ವಲ್ಪ ಹೊತ್ತಿನಲ್ಲಿ ಅಕ್ಕಮ್ಮನಿಗೆ ನಿದ್ದೆ ಬಂತು.

ಇಬ್ಬರಾಳೆಂಡಿರ ಬಿಟ್ಟು ಕದ್ದು ತಾ ಓಗಿ
ಚಾಮುಂಡಿ ಕದವನ್ನು ತಟ್ಟಿದ

ಚಾಮುಂಡಿ ಕದವನ್ನು ತಟ್ಟುತ ಹೇಳಿದ:

ತೆಗಿಯೇ ಚಾಮುಂಡಿ ಅಗಣೀಯ

ಮನೆಯ ಕದ ತೆರೆಯಿತು!

(ಶ್ರೀಲಕ್ಷ್ಮಿ ಮತ್ತು ರಾಧಾ ಹಾಸನದ ಏವಿಕೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯಾರಾಗಿದ್ದಾಗ ತಮಲಾಪುರವೆಂಬ ಹಳ್ಳಿಯಲ್ಲಿ ಪುಟ್ಟ ಬೋರಮ್ಮನವರಿಂದ ಸಂಗ್ರಹಿಸಿದ ಜನಪದ ಗೀತೆ)